ಹೋಯಿತು’.

‘ಆಮೇಲೆ ಏನಾಯ್ತು?’

‘ಎರಡನೆಯ ಹಕ್ಕಿಯು ಬಂದು ಒಂದು ಕಾಳನ್ನು ಕಚ್ಚಿಕೊಂಡು ರಕ್ಕೆಯನ್ನು ಬಡಿಯುತ್ತಾ ಹಾರಿ ಹೋಯಿತು’ ಎಂದನು ಬೀರಬಲ್.

‘ಮುಂದೆನಾಯಯ್ತು?’

‘ಮೂರನೇ ಹಕ್ಕಿಯು ಬಂದಿತು, ಒಂದು ಕಾಳನ್ನು ಕಚ್ಚಿಕೊಂಡಿತು, ರಕ್ಕೆಯನ್ನು ಬಡಿಯುತ್ತಾ ಅಲ್ಲಿಂದ ಹಾರಿಹೋಯಿತು.’

‘ಆಮೇಲೆ ಏನಾಯಿತು?’

‘ಮಹಾರಾಜ, ನಾಲ್ಕನೇ ಹಕ್ಕಿಯು ಬಂದಿತು, ಒಂದು ಕಾಳನ್ನು ಕಚ್ಚಿಕೊಂಡು ರಕ್ಕೆಯನ್ನು ಬಡಿಯುತ್ತಾ ಹಾರಿಹೋಯಿತು’ ಎಂದನು ಬೀರಬಲ್ಲ.

ಬೀರಬಲ್ಲನ ಕಥೆಯನ್ನು ಕೇಳಿ ಅಕ್ಬರನಿಗೆ ಬೇಸರವಾಗಿತ್ತು. ಆಗ ಅಕ್ಬರ್ ‘ಇನ್ನೂ ಎಷ್ಟು ಹಕ್ಕಿಗಳಿವೆ?’ ಎಂದು ಕೇಳಿದನು.

ಆಗ ಬೀರಬಲ್ಲ ನಗುತ್ತಾ ‘ಮಹಾರಾಜ, ಈಗಿನ್ನೂ ನಾಲ್ಕು ಹಕ್ಕಿಗಳು ಮಾತ್ರ ಹಾರಿ ಹೋದವು. ಸಾವಿರ ಹಕ್ಕಿಗಳಲ್ಲಿ ಉಳಿದವು ಹಾರಿ ಹೋಗಲು ಬಹಳ ಸಮಯ ಬೇಕಾಗುತ್ತದೆ ಅಲ್ಲವೇ?’ ಎಂದನು.

ಅಕ್ಬರನಿಗೆ ನಿದ್ದೆಯ ಮಂಪರು ಹತ್ತಿ ಆಕಳಿಸುತ್ತಾ, ‘ಬೀರಬಲ್, ಇನ್ನುಳಿದ ಹಕ್ಕಿಗಳು ನಾಳೆ ಹಾರಬಹುದೆ? ನನಗೆ ತುಂಬಾ ನಿದ್ದೆ ಬರುತ್ತಿದೆ’ ಎಂದನು. ಅಕ್ಬರ್ ನಿದ್ದೆಗೆ ಜಾರಿದನು. ಬೀರಬಲ್ಲನು ಅರಮನೆಯಿಂದ ಹೊರ ಹೋದನು. ಮಾರನೆಯ ದಿನ ಅಕ್ಬರ್ ನಗು ನಗುತ್ತಾ ಉಲ್ಲಾಸದಿಂದ ಇದ್ದನು. ಅವನ ಮುಖವು ನಗುವಿನಿಂದ ಹೊಳೆಯುತ್ತಿತ್ತು. ಅಕ್ಬರನು ‘ಬೀರಬಲ್, ನಿನ್ನ ಕಥೆಯನ್ನು ಕೇಳಿ ನಾನು ನಿಜವಾಗಿಯೂ ಸಂತೋಷಪಟ್ಟೆ. ಆ ಕಥೆಯನ್ನು ಕೇಳಿ ರಾತ್ರಿ ಚೆನ್ನಾಗಿ ನಿದ್ದೆ ಮಾಡಿದೆ’ ಎಂದನು. ಬೀರಬಲ್ಲನು ‘ಆ ನಂತರ ಏನಾಯಿತು?’ ಎಂದನು. ಅದಕ್ಕೆ ಅಕ್ಬರನು ‘ಹಕ್ಕಿಯೊಂದು ಹಾರಿ ಬಂದಿತು. ಕಾಳೊಂದನ್ನು ಕಚ್ಚಿಕೊಂಡು ರಕ್ಕೆಯನ್ನು ಬಡಿಯುತ್ತಾ ಹಾರಿ ಹೋಯಿತು’ ಎಂದನು. ಅಕ್ಬರನ ಉತ್ತರದಿಂದ ಅವರಿಬ್ಬರೂ ಸಂತೋಷದಿಂದ ನಕ್ಕರು.

**■ ವೇದಾವತಿ ಹೆಚ್. ಎಸ್.**



ಚಿತ್ರ: ಶಶಿಕಿರಣ್ ದೇಸಾಯಿ



# ಸುವ್ವಿ ಸುವ್ವಿ

ಮಳೆ ಬಂದು ಕೆರೆಯಲ್ಲಿ ಕೆನ್ನೀರು ಸುವ್ವಿ
ಬೆಳ್ಳನೆ ಬೆಳ್ಳಕ್ಕಿ ಈಜುತ್ತ ಸುವ್ವಿ
ಬುಳಕ್ಕನೆ ಮುಳುಗಿ ಕೊರಳೆತ್ತಿ ಸುವ್ವಿ
ಬೆಳ್ಳಿಮೀನನು ಹಿಡಿದು ಹಾರಿತ್ತು ಸುವ್ವಿ

ದೋಣಿ ಎನುವಂತೆ ನೀರ್ಕೋಳಿ ಸುವ್ವಿ
ತೇಲುತ್ತ ತೇಲುತ್ತ ಮುಳುಗಿಟ್ಟು ಸುವ್ವಿ
ಕೊಕ್ಕಿನಲಿ ಕಚ್ಚಿದ ಕೆಮ್ಮೀನ ಸುವ್ವಿ
ಗುಳಕ್ಕನೆ ನುಂಗಿ ಮತ್ತೆ ಮುಳುಗಿತು ಸುವ್ವಿ

ತನ್ನನು ಹಿಡಿದು ನುಂಗೀತೆಂದು ಸುವ್ವಿ
ಹೆದರಿ ಏಡಿಯು ಕೆಸರಡಿ ಅಡಗಿತು ಸುವ್ವಿ
ಪುಟ್ಟ ಕಪ್ಪೆಯು ಬೆದರಿ ಹಿಂಗಾಲುಗಳ ಚಾಚಿ
ನೀರಿನಲೆ ಒದ್ದು ಕಲ್ಲಿನ ಸಂದು ಸೇರಿತು ಸುವ್ವಿ

ಏರಿ ಮೇಲಿನ ಅತ್ತಿಮರ ತುಂಬ ಸುವ್ವಿ
ಕೆಂಪಾಗಿ ಮಾಗಿದ ಹಣ್ಣುಗಳು ಸುವ್ವಿ
ಕೊಂಬೆಕೊಂಬೆಗೆ ನೆಗೆದಾಡಿ ಕೋತಿಗಳು ಸುವ್ವಿ
ತಿಂದುದಕಿಂತ ಕಿತ್ತೆಸೆದುದು ಹೆಚ್ಚು ನೋಡಮ್ಮ ಸುವ್ವಿ

ಪುರ್ರನೆ ಹಾರುತ್ತ ಬಂದ ಗಿಳಿವಿಂಡು ಸುವ್ವಿ
ಕೊಕ್ಕಿನಲಿ ಹಣ್ಣುಗಳ ಕುಕ್ಕಿಕುಕ್ಕಿ ಸುವ್ವಿ
ಕೊಕ್ಕುಗಳು ಮತ್ತಷ್ಟು ಕೆಂಪೇರಿ ಸುವ್ವಿ
ಎಲೆಯಡಿಕೆ ಜಗಿದ ನನ್ನಜ್ಜಿ ತುಟಿಯಂತೆ ಸುವ್ವಿ

ನೀರಿನಲೆಗಳ ಮೇಲೆ ಗಾಳಿ ಬೀಸಿತು ಸುವ್ವಿ
ಅತ್ತಿ ಹೊಂಗೆಗಳ ಕೊಂಬೆಗಳು ತೂಗಿ
ಬೀಸಿದ ಗಾಲಿಯೂ ಕೂಡಿ ಸುವ್ವಿ
ಚಳಿಯೇರಿ ಮೈ ನಡುಗಿ ತಾತನ ಕಂಬಳಿ ನೆನಪಾಯ್ತು ಸುವ್ವಿ

**■ ಸ. ರಘುನಾಥ**